

■ ಜಿ. ಕೃಷ್ಣಪ್ಪ
ಕಲೆ: ಸಂತೋಷ್ ಸಸಿಹಿತ್ಲು

# ಚೆಲುವಮ್ಮ

ಒಂದು ಊರಿನಲ್ಲಿ ಚೆಲುವಮ್ಮ ಎನ್ನುವ ಹುಡುಗಿ ಹೆಸರಿಗೆ ತಕ್ಕಂತೆ ತುಂಬಾ ಸುಂದರವಾಗಿದ್ದಳು. ಅದರ ಜೊತೆಗೆ ಅವಳು ಬುದ್ಧಿವಂತಳೂ ಒಳ್ಳೆಯವಳೂ ಆಗಿದ್ದಳು. ಅವಳ ತಂದೆ, ತಾಯಿ ಬಡವರು. ಅವಳ ದುರದೃಷ್ಟಕ್ಕೆ ಅವಳ ತಾಯಿಯು ಅವಳಿಗೆ 5 ವರ್ಷವಿದ್ದಾಗ ತೀರಿ ಹೋದಳು. ಸಾಯುವ ಮೊದಲು ಆ ತಾಯಿ ಮಗಳಿಗೆ ಒಂದು ಸೂಜಿಯನ್ನು ಕೊಟ್ಟಳು. ಅದನ್ನು ಜೋಪಾನವಾಗಿಟ್ಟುಕೊಂಡು, ಹರಿದು ಹೋದ ಬಟ್ಟೆ ಹೊಲಿಯುತ್ತ, ಅವುಗಳ ಮೇಲೆ ಹೂಗಳನ್ನು ಬಿಡಿಸಲು ಹೇಳಿದಳು. ಅವಳು ಅದೇ ರೀತಿ ಅಕ್ಕಪಕ್ಕದವರಿಗೆ ಹಳೆಯ ಬಟ್ಟೆ ಹೊಲಿದು ಕೊಡುತ್ತ, ಹೂ ಬಿಡಿಸುತ್ತ ಎಲ್ಲರ ಮೆಚ್ಚುಗೆಗೆ ಪಾತ್ರವಾದಳು.

ಚೆಲುವಮ್ಮನ ತಂದೆ ಎರಡನೆಯ ಮದುವೆಯಾದ. ಆ ಚಿಕ್ಕಮ್ಮ ಅವಳಿಗೆ ಮನೆಯ ಎಲ್ಲ ಕೆಲಸ ಮಾಡಲು ಹೇಳಿ ಊಟ ಸರಿಯಾಗಿ ಹಾಕದೆ ತುಂಬ ಹಿಂಸೆ ಕೊಡುತ್ತಿದ್ದಳು. ನೋಡು ನೋಡುತ್ತಿದ್ದಂತೆ ಅವಳು ದೊಡ್ಡವಳಾದಳು. ಒಮ್ಮೆ ಚೆಲುವಮ್ಮ ಒಂದು ಬಾವಿಯ ಕಟ್ಟೆಯ ಮೇಲೆ ಕುಳಿತು ತನ್ನ ಹರಿದು ಹೋದ ಒಂದು ಲಂಗವನ್ನು ಹೊಲಿಯುತ್ತ, ಅದರ ಅಂಚಿಗೆ ಬಣ್ಣ ಬಣ್ಣದ ದಾರಗಳಿಂದ ಹೂ ಬಿಡಿಸುತ್ತಿದ್ದಳು. ಆಗ ಕೈತಪ್ಪಿ ಸೂಜಿ ಬಾವಿಯಲ್ಲಿ ಬಿದ್ದು ಹೋಯಿತು. ಅವಳು ಹಿಂದೆ ಮುಂದೆ ಯೋಚಿಸದೆ ಅದನ್ನು ಪಡೆಯಲು ಬಾವಿಗೆ ಧುಮುಕಿದಳು. ಅವಳಿಗೆ ಆಶ್ಚರ್ಯವಾಗುವಂತೆ ಅಲ್ಲಿ ಒಂದು ತೋಟವಿತ್ತು.

ಅಲ್ಲಿ ಒಂದು ಆನೆಯ ಕಾಲಿಗೆ ಮುಳ್ಳು ಚುಚ್ಚಿಕೊಂಡಿತ್ತು. ಅದು ಗೀಳಿಡುತ್ತ ಚೆಲುವಮ್ಮನನ್ನು ಮುಳ್ಳು ತೆಗೆಯಲು ಕೇಳಿಕೊಂಡಿತು. ಅವಳು ಅದರ ಹತ್ತಿರ ಹೋಗಿ ಕರುಣೆಯಿಂದ ಮೈಸವರಿದಳು. ಅದರ ಕಾಲಿಗೆ ಒತ್ತಿಕೊಂಡಿದ್ದ ಮುಳ್ಳನ್ನು ನಾಜೂಕಾಗಿ ತೆಗೆದಳು. ಅದು ನೋವಿನಿಂದ ಮುಕ್ತವಾಗಿ ಸಂತೋಷಪಟ್ಟಿತು. ಕಾಲೂರಿ ನಡೆಯುತ್ತ ನಾನು ಯಾವಾಗಲಾದರು ನಿನಗೆ ಸಹಾಯ ಮಾಡುವೆ' ಎಂದು ಹೇಳಿತು.

ಅವಳು ಹಾಗೆ ಮುಂದಕ್ಕೆ ನಡೆದು ಹೋಗುತ್ತಿರಲು ಅಲ್ಲಿ ಗುಲಾಬಿ ಹೂ ಗಿಡಗಳು ಬತ್ತಿ ಹೋಗಿದ್ದವು. ಅವು ಚೆಲುವಮ್ಮನನ್ನು ದೂರದ ಕೊಳದಿಂದ ನೀರು ತಂದು ಹಾಕಿ ಬದುಕಿಸಲು ಕೇಳಿಕೊಂಡವು. ಅವಳು ದೂರದ ಕೊಳದಿಂದ ನೀರು ತಂದು ಹೂಯ್ದಳು. ಅವು ಜೀವ ಬಂದಂತಾಗಿ ಸಂತೋಷಪಟ್ಟವು. ನಾವು ಯಾವಾಗಾದರೂ ನಿನಗೆ ಸಹಾಯ ಮಾಡುವೆವು ಎಂದು ಹೇಳಿದವು.

ಚೆಲುವಮ್ಮ ಹಾಗೆ ಮುಂದಕ್ಕೆ ಹೋಗುತ್ತಿರಲು ಅಲ್ಲಿ ಇರುವೆಗಳ ಸಾಲಿತ್ತು. ಅವು ನಮಗೆ ಹಸಿವಾಗಿದೆ ಏನಾದರೂ ಕೊಡು ಎಂದು ಕೇಳಿಕೊಂಡವು. ಆಕೆ ದೂರದಲ್ಲಿ ಒಂದು ಗುಡಿಸಲು ಇರುವುದನ್ನು ನೋಡಿದಳು. ಅಲ್ಲಿಗೆ ಹೋಗಿ ಅಕ್ಕಿನುಚ್ಚು, ಸಕ್ಕರೆಯನ್ನು ಕೇಳಿ ತೆಗೆದುಕೊಂಡು ಬಂದು ನೀಡಿದಳು. ಅವೂ ಯಾವಾಗಲಾದರು ನಿನಗೆ ಸಹಾಯ ಮಾಡುವೆವು ಎಂದು ಹೇಳಿದವು.

ಚೆಲುವಮ್ಮನು ಗುಡಿಸಲ ಮನೆಯ ಅಜ್ಜಿಯ ಹತ್ತಿರ ತನ್ನ ಕಷ್ಟ ಹೇಳಿಕೊಂಡಳು. ಸೂಜಿ ಹುಡುಕುತ್ತ ಬಂದಿರುವುದಾಗಿ ತಿಳಿಸಿದಳು. ಅಜ್ಜಿಯು ತಂಗಳು ಮತ್ತು ಬಿಸಿಯೂಟವಿದೆ. ನಿನಗೆ ಯಾವುದು ಬೇಕು? ಎಂದು ಕೇಳಲು, ಅವಳು ತಂಗಳು ಕೊಡಿ ಎಂದಳು. ಅಜ್ಜಿ ಅವಳಿಗೆ ಬಿಸಿ ಊಟ ನೀಡಿ ಉಪಚರಿಸಿದಳು.

ಅನಂತರ ಸ್ನಾನಕ್ಕೆ ಬಿಸಿ ನೀರು, ತಣ್ಣೀರು ಇದೆ. ನಿನಗೆ ಯಾವುದು ಬೇಕು? ಎಂದು ಕೇಳಿದಳು. ಚೆಲುವಮ್ಮ ತಣ್ಣೀರು ಎನ್ನಲು, ಅಜ್ಜಿ ಬಿಸಿ ನೀರು ಕೊಟ್ಟಳು. ಸ್ನಾನವಾದ ನಂತರ ಹಳೆಯ ಬಟ್ಟೆ,